ಔಟ್‌ಪೋಸ್ಟ್‌ನ್ನು ಕೊಡುವುದಕ್ಕೆ ತಾವು ಆಶ್ವಾಸನೆಯನ್ನು ಕೊಡಬೇಕು.

ಶ್ರೀ ಆರ್.ರೋಷನ್ ಬೇಗ್: ಇದನ್ನು ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು: ವಾಟಾಳರೇ, ಪ್ರಶ್ನೋತ್ತರ ಮುಗಿದುಹೋಗಿದೆ ಅಲ್ಲವೆ? ನಿಮ್ಮದೊಂದು ಇದೆ ಅಲ್ವಾ? ಅದು ಕಡೆಯ ಪ್ರಶ್ನೆ.

ಅಬಕಾರಿ ಗುತ್ತಿಗೆದಾರರಿಂದ ಬರಬೇಕಾಗಿರುವ ಬಾಕಿ ಹಣ

15 (27)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಕ್ಕೆ ಅಬಕಾರಿ ಗುತ್ತಿಗೆದಾರರಿಂದ ಇದುವರೆವಿಗೆ ಬರಬೇಕಾದ ಬಾಕಿ ಹಣದ ಮೊತ್ತವೆಷ್ಟು?

ಆ) ಬೆಂಗಳೂರು ನಗರ, ಬೆಂಗಳೂರು ಜಿಲ್ಲೆಯಲ್ಲಿ ಇರುವ ಅಬಕಾರಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಅಧೀಕ್ಷಕರ ಸಂಖ್ಯೆ ಎಷ್ಟು? ಅವರುಗಳು ಯಾರು ಯಾರು ಎಷ್ಟು ವರ್ಷಗಳಿಂದ ಇದ್ದಾರೆ?

ಇ) ಬೆಂಗಳೂರು ಸೇರಿದಂತೆ ಕರ್ನಾಟಕ ರಾಜ್ಯಾದ್ಯಂತ ಇರುವ ಅಬಕಾರಿ ಜಿಲ್ಲಾಧಿಕಾರಿಗಳು ಹಾಗೂ ಅಧೀಕ್ಷಕರುಗಳು ಇವರುಗಳಲ್ಲಿ ಎಷ್ಟು ಜನರ ಮೇಲೆ ಮೊಕದ್ದಮೆಗಳು ಇವೆ

ಈ) ಇವರುಗಳಲ್ಲಿ ಎಷ್ಟು ಜನರನ್ನು ಅಮಾನತ್ತುಗೊಳಿಸಲು ಸರ್ಕಾರದವರು ಆದೇಶ ನೀಡಿದ್ದಾರೆ (ವಿವರ ನೀಡುವುದು)

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು):

ಅ) ಅಬಕಾರಿ ಗುತ್ತಿಗೆದಾರರಿಂದ ದಿನಾಂಕ 30.11.1997ರಲ್ಲಿ ಇದ್ದಂತೆ ಬಾಕಿ ಬರಬೇಕಾದ ಬಾಕಿ ರೂ.297.89 ಕೋಟಿಗಳು.

ಆ) ಬೆಂಗಳೂರು ನಗರ, ಬೆಂಗಳೂರು ಜಿಲ್ಲೆಯಲ್ಲಿ ಇರುವ ಅಬಕಾರಿ ಉಪ ಆಯುಕ್ತರು ಹಾಗೂ ಅಬಕಾರಿ ಅಧೀಕ್ಷಕರ ಸಂಖ್ಯೆ ಈ ಕೆಳಗಿನಂತೆ ಇದೆ.

ಕ್ರ. ಸಂ.	ಜಿಲ್ಲೆ	ಅಬಕಾರಿ ಉಪ ಆಯುಕ್ತರು	ಅಬಕಾರಿ ಅಧೀಕ್ಷಕರು
1.	ಬೆಂಗಳೂರು ನಗರ	1	2
2.	ಬೆಂಗಳೂರು ಜಿಲ್ಲೆ	1	1

ಸದರಿ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ವಿವರ ಈ ರೀತಿ ಇರುತ್ತದೆ.

ಬೆಂಗಳೂರು ನಗರ ಜಿಲ್ಲೆ

1) ಶ್ರೀ ಪಿ.ಎನ್.ಪಾಪಣ್ಣ 8:96 ರಿಂದ
ಅಬಕಾರಿ ಉಪ ಆಯುಕ್ತರು

2) ಶ್ರೀ ರೋಹಿದಾಸ್ ನಾಯಕ್ 7:95 ರಿಂದ
ಅಬಕಾರಿ ಅಧೀಕ್ಷಕರು

3) ಶ್ರೀ ಎಂ.ಪ್ರಭುಸ್ವಾಮಿ 6:96 ರಿಂದ
ಅಬಕಾರಿ ಅಧೀಕ್ಷರು

ಬೆಂಗಳೂರು (ಗ್ರಾ) ಜಿಲ್ಲೆ

1) ಶ್ರೀ ಎ.ಎಸ್.ಆಲ್ಮೇಡಾ 9:97 ರಿಂದ
ಅಬಕಾರಿ ಉಪ ಆಯುಕ್ತರು

2) ಶ್ರೀ ಕೆ.ಗೋವಿಂದಪ್ಪ 7:97 ರಿಂದ
ಅಬಕಾರಿ ಅಧೀಕ್ಷಕರು

ಇ) 1) ಅಬಕಾರಿ ಉಪ ಆಯುಕ್ತರು -4

2) ಅಬಕಾರಿ ಅಧೀಕ್ಷರು -3

ಒಟ್ಟು 7

ಈ) ಆ ಸಮಯದಲ್ಲಿ ಈ ಕೆಳಕಂಡವರನ್ನು ಅಮಾನತುಗೊಳಿಸಲು ಆದೇಶಿಸಲಾಗಿತ್ತು.

ಕ್ರ. ಸಂ.	ಹುದ್ದೆ	ಅಧಿಕಾರಿಗಳ ಹೆಸರು
1)	ಅಬಕಾರಿ ಉಪ ಆಯುಕ್ತರು	1) ಶ್ರೀ ಹೆಚ್.ವೈ.ಹೊಸನೇಮತಿ ಅಬಕಾರಿ ಉಪ ಆಯುಕ್ತರು ಮೈಸೂರು (ಅಂದಿನ ಅಬಕಾರಿ ಅಧೀಕ್ಷಕರು) ಮೆ: ಸೋಮಯ್ಯ ಆರ್ಗಾನಲ್ ಕೆಮಿಕಲ್ಸ್ ಅಂಡ್ ಡಿಸ್ಟಿಲರಿ ಸಪ್ತಗಿರಿ ಎಂಟರ್‌ಪ್ರೈಸಸ್ ಡಿಸ್ಟಿಲರಿ, ಸಮೀರ್‌ವಾಡಿ
		2) ಶ್ರೀ ಪಿ.ಎನ್.ಪಾಪಣ್ಣ ಅಬಕಾರಿ ಉಪ ಆಯುಕ್ತರು ಬೆಂಗಳೂರು (ನಗರ) ಅಂದಿನ ಉಪ ಆಯುಕ್ತರು ತುಮಕೂರು ಜಿಲ್ಲೆ
		3) ಶ್ರೀ ರುದ್ರಾನಾಯಕ್ ಅಬಕಾರಿ ಉಪ ಆಯುಕ್ತರು ಮಂಡ್ಯ ಜಿಲ್ಲೆ ಅಂದಿನ ಅಬಕಾರಿ ಉಪ ಆಯುಕ್ತರು ಕೊಡಗು ಜಿಲ್ಲೆ, ಮಡಿಕೇರಿ
2)	ಅಬಕಾರಿ ಅಧೀಕ್ಷಕರು	-ಇಲ್ಲ-

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಇಲ್ಲಿ ಸರ್ಕಾರದ ಅಬ್ಕಾರಿ ಗುತ್ತಿಗೆದಾರರಿಂದ ಇದುವರೆಗೆ ಬಾಕಿ ಬರಬೇಕಾದ ಮೊತ್ತ ಎಷ್ಟು ಎಂದರೆ 297.89 ಕೋಟಿ ಅಂತ ಹೇಳಿದ್ದಾರೆ. ಇದು ಎಷ್ಟು ವರ್ಷಗಳಿಂದ ಬಾಕಿ ನಿಂತಿದೆ? ಯಾರ್ಯಾರು ಈ ಹಣವನ್ನು ಕೊಡಬೇಕಾಗಿದೆ?

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೇ, ಈ 297 ಕೋಟಿಯಲ್ಲಿ ಸುಮಾರು 45ನೇ ಇಸವಿಯಿಂದ ಇರತಕ್ಕಂಥ ಬಾಕಿಗಳೂ ಇವೆ. ಸ್ವಾತಂತ್ರ್ಯ ಬರುವುದಕ್ಕೆ ಮುಂಚಿತವಾಗಿನದ್ದು ಇವೆ. ಇದರಲ್ಲಿ ಸುಮಾರು 159 ಕೋಟಿ ರೂಪಾಯಿ ಆಸಲು ಬರಬೇಕಾಗಿರತಕ್ಕಂಥಾದ್ದು. 138 ಕೋಟಿ ಬಡ್ಡಿ ಬರಬೇಕಾಗಿದೆ. ಇದು ಬೇರೆಬೇರೆ ಹಂತಗಳಲ್ಲಿದೆ, ಕೆಲವು ಕೋರ್ಟಿನಲ್ಲಿ ಹಾಕಿದ್ದೇವೆ. ಸುಮಾರು 191 ಕೋಟಿ ರೂಪಾಯಿಗಳು ಬೇರೆಬೇರೆ ಹಂತದಲ್ಲಿ ವಸೂಲು ಮಾಡುವುದಕ್ಕೆ ನೋಟೀಸ್ ಕೊಟ್ಟಿರತಕ್ಕಂಥಾದ್ದು ಇದೆ. ಇದರಲ್ಲಿ ಬಹುತೇಕವಾಗಿ ಬೇನಾಮಿ ಹೆಸರಿನಲ್ಲಿ ಇರತಕ್ಕಂಥಾದ್ದು ಇದ್ದು ಇವರ ಹೆಸರುಗಳನ್ನು ಪತ್ತೆಹಚ್ಚಬೇಕಾಗಿದೆ. ಅವರು ಯಾರ್ಯಾರದ್ದೋ ಹೆಸರಿನಲ್ಲಿ ಮಾಡಿಕೊಂಡುಬಿಟ್ಟಿದ್ದಾರೆ. ಹಾಗಾಗಿ ಕಾನೂನು ರೀತ್ಯಾ ಕ್ರಮ ತೆಗೆದುಕೊಳ್ಳುವುದು ಕೂಡ ಇದು ಸ್ವಲ್ಪ ಕಷ್ಟದ ಕೆಲಸವಾಗುತ್ತದೆ. ಈಗ ನಾವು ಸುಮಾರು 41 ಕೋಟಿ ರೂ.ಗಳಿಗೆ ಕೋರ್ಟಿನಲ್ಲಿ ಸ್ಟೇ ತೆಗೆದುಕೊಂಡಿದ್ದೇವೆ. 64

ಕೋಟಿಯಷ್ಟು ವಸೂಲು ಮಾಡುವುದಕ್ಕೆ ಡಿ.ಸಿ.ಗಳಿಗೆ ಹೇಳಿದ್ದು ಅದು ಬೇರೆಬೇರೆ ಹಂತದಲ್ಲಿದೆ. ಹಾಗಾಗಿ ಅವರಿಗೆ ನೋಟೀಸ್ ಕೊಡತಕ್ಕದ್ದು ಮತ್ತು ಆಗ ಯಾರು ನಿಜವಾದ ವ್ಯಕ್ತಿ ಇದ್ದರು ಎನ್ನತಕ್ಕಂಥಾದ್ದು ಬರುತ್ತದೆ. ಹೀಗಾಗಿ ಲೀಗಲ್ ಆಗಿ ವಸೂಲು ಮಾಡುವುದು ಕಷ್ಟದ ಕೆಲಸವಾಗಿದೆ. ವಸೂಲು ಮಾಡುವುದಕ್ಕೆ ಪ್ರಾಮಾಣಿಕ ಪ್ರಯತ್ನವಂತೂ ಮಾಡುತ್ತಿದ್ದೇವೆ. ಈ ವರ್ಷ 6 ಕೋಟಿ ಗಿಂತ ಹೆಚ್ಚು ಹಣ ವಸೂಲು ಮಾಡಿದ್ದೇವೆ. ಮತ್ತು ಎಷ್ಟು ಸಾಧ್ಯವಾಗುತ್ತದೋ ಅಷ್ಟು ವಸೂಲು ಮಾಡುತ್ತಿದ್ದೇವೆ. ಪ್ರಾಮಾಣಿಕವಾಗಿ ಕಾನೂನು ರೀತ್ಯಾ ಎಲ್ಲಿ ರೀತಿಯ ಪ್ರಯತ್ನಗಳನ್ನೂ ಮಾಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ನನ್ನ ಪ್ರಶ್ನೆ ಯಾರ್ಯಾರಿಂದ ಈ ಬಾಕಿ ಉಳಿದಿದೆ, ಯಾರ್ಯಾರು ಈ ಬಾಕಿ ಕೊಡಬೇಕು ಎನ್ನತಕ್ಕಂಥಾದ್ದು.

ಶ್ರೀ ಸಿದ್ಧರಾಮಯ್ಯ: ಸುಮಾರು 94 ಜನ ಕಂಟ್ರಾಕ್ಟರ್ಸ್ ಇದರಲ್ಲಿ ಇದ್ದಾರೆ. ಇದು ಬೇರೆ ಬೇರೆ ಹೆಸರುಗಳಲ್ಲಿ ಇವೆ. ಯಾರು ಈ ವ್ಯವಹಾರ ಮಾಡುತ್ತಿದ್ದಾರೆ, ಅದು ಬೇನಾಮಿ ಹೆಸರುಗಳೇ ಇವೆ. ಸುಮಾರು 94ಜನ ಈ ತರಹ ಹೆಸರಿನವರು ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್: ನನಗನ್ನಿಸುತ್ತದೆ ನಿಮ್ಮ ಸರ್ಕಾರದಲ್ಲಿ, ಇವರ ಕೈಯಿಂದ ವಸೂಲು ಮಾಡುವುದಕ್ಕೆ ಶಕ್ತಿ ಇದೆಯೋ ಇಲ್ಲವೋ? ಸ್ವಾತಂತ್ರ್ಯ ಪೂರ್ವದಿಂದ ಎಂದು ಹೇಳಿದಿರಿ. ಸ್ವಾತಂತ್ರ್ಯಪೂರ್ವದಿಂದ ಅವರದ್ದು ಬಾಕಿ ಎಂದು ಹೇಳಿದಿರಿ. ಕನಿಷ್ಟಪಕ್ಷದ ಸ್ವಾತಂತ್ರ್ಯಪೂರ್ವದಲ್ಲಿ ಇದ್ದವರ ಹೆಸರುಗಳನ್ನಾದರೂ ಹೇಳಿ. ಅವರು ಯಾರು?

ಶ್ರೀ ಸಿದ್ಧರಾಮಯ್ಯ: ಆ ಮಾಹಿತಿ ಇಲ್ಲ.

ಅಧ್ಯಕ್ಷರು: ತರಿಸಿಕೊಡುತ್ತಾರೆ.

ಶ್ರೀ ಸಿದ್ಧರಾಮಯ್ಯ: ಸ್ವಾತಂತ್ರ್ಯಪೂರ್ವದಲ್ಲಿ ಎಷ್ಟು ಜನ ಇದ್ದರು, ಸ್ವಾತಂತ್ರ್ಯ ಬಂದಮೇಲೆ ಎಷ್ಟು ಜನ ಇದ್ದಾರೆ ಎನ್ನುವ ಮಾಹಿತಿಯನ್ನು ಇವತ್ತೇ ಒದಗಿಸಿಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ನೇರವಾಗಿ ಹೇಳಿ. ಇವರಿಂದ ವಸೂಲು ಮಾಡುವುದಕ್ಕೆ ಆಗುತ್ತದೆಯೇ ಅಥವ ಇಲ್ಲವೇ ಎನ್ನತಕ್ಕಂಥಾದ್ದು ನಮಗೆ ಬೇಕು. ಕೆಲವು ಜಿಲ್ಲಾಧಿಕಾರಿಗಳಿಗೆ ಬಿಟ್ಟಿದ್ದೇವೆ ಎಂದು ಹೇಳಿದ್ದೀರಿ. ಆ ಜಿಲ್ಲಾಧಿಕಾರಿಗಳು ಏಕೆ ವಸೂಲು ಮಾಡುತ್ತಿಲ್ಲ? ಏಕೆ ವಸೂಲು ಮಾಡಿಲ್ಲವೆಂದು ನೀವು ಕೇಳಿದ್ದೀರಾ? ಅವರಿಗೆ ಏನು ವ್ಯವಸ್ಥೆ ಮಾಡಿದ್ದೀರಿ? ಕಾಲಕಾಲಕ್ಕೆ ಚೆಕ್ ಮಾಡಿದ್ದೀರಾ? ಇದಕ್ಕೆ ಕಾರಣ ಏನು?

ಶ್ರೀ ಸಿದ್ಧರಾಮಯ್ಯ: ಬಾಕಿ ವಸೂಲಿ ಮಾಡುವುದಕ್ಕೆ ನಾವು ಏನೇನು ಕಾನೂನಿನಲ್ಲಿ

ಕ್ರಮ ತೆಗೆದುಕೊಳ್ಳುವುದಕ್ಕೆ ಆಗುತ್ತದೆ ಅದನ್ನು ತೆಗೆದುಕೊಂಡರೂ ಕೂಡ ವಸೂಲಿ ಮಾಡುವುದಕ್ಕೆ ಆಗದೇ ಇರುವ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳಿಗೆ ಆರಿಯರ್ಸ್ ಆಫ್ ರೆವಿನ್ಯೂ ಎಂದು ಹೇಳಿ ವಸೂಲು ಮಾಡಬೇಕು ಎಂದು ಹೇಳಿ ಅವರು ಕ್ರಮ ತೆಗೆದುಕೊಳ್ಳುವುದಕ್ಕೆ ಇದನ್ನು ಜಿಲ್ಲಾಧಿಕಾರಿಗಳಿಗೆ ವಹಿಸಿದ್ದೇವೆ. ಜಿಲ್ಲಾಧಿಕಾರಿಗಳು ಕಾನೂನು ರೀತ್ಯಾ ಆರಿಯರ್ಸ್ ಆಫ್ ರೆವಿನ್ಯೂ ಎಂದು ವಸೂಲು ಮಾಡಬೇಕು. ಆದರೆ ಬೇನಾಮಿ ಹೆಸರಿನಲ್ಲಿ ಅವರದ್ದು ಯಾವ ಪ್ರಾಪರ್ಟಿಯೂ ಇರುವುದಿಲ್ಲ. ಮತ್ತೆ ಜಿಲ್ಲಾಧಿಕಾರಿಗಳು ನಮ್ಮನ್ನು ಕೇಳಿದ್ದಾರೆ. ಇವರ ಹೆಸರಿನಲ್ಲಿ ಏನೇನು ಪ್ರಾಪರ್ಟಿಗಳು ಇವೆ, ಚರ-ಸ್ಥಿರ ಪ್ರಾಪರ್ಟಿ ಏನೇನಿದೆ ಎನ್ನತಕ್ಕಂಥಾದ್ದನ್ನು ಅವರು ಕೇಳಿದ್ದಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಶಾಸಕರು ಬಾಕಿದಾರರು, ಮಂತ್ರಿಗಳು ಬಾಕಿದಾರರು ಎಂದು ಹೇಳಿ ಹರಾಜು ಹಾಕುತ್ತೀರಿ. ಇವರಿಗೆ ಏನೂ ಇಲ್ಲವೇನು?

ಶ್ರೀ ಸಿದ್ಧರಾಮಯ್ಯ: ಅದು ಕೋರ್ಟ್‌ನಲ್ಲಿ ಸ್ಪೆಸಿಫಿಕ್ ಆಗಿ ಇದೆ. ಆದ್ದರಿಂದ ಬರುತ್ತದೆ.

ಅಧ್ಯಕ್ಷರು: ಶಾಸಕರಿಗೆ ವಿಳಾಸ ಇರುತ್ತದೆ, ಈ ಬಾಕಿದಾರರುಗಳಿಗೆ ವಿಳಾಸ ಇಲ್ಲ, ಇವರೆಲ್ಲರೂ ದೊಡ್ಡ ಮನುಷ್ಯರು. ಆದ್ದರಿಂದ ಬೇನಾಮಿಯಾಗಿರುತ್ತಾರೆ. ಹಾಗಾಗಿ ಸ್ವಲ್ಪ ನಿಧಾನವಾಗಿರುತ್ತದೆ.

ಶ್ರೀ ವಾಟಾಳ್ ನಾಗರಾಜ್: ಹಾಗಾದರೆ ಸರ್ಕಾರ ಬೇನಾಮಿಯೇ? ಈ ಸರ್ಕಾರವು ವ್ಯವಸ್ಥೆ ಮಾಡುವುದಕ್ಕೆ ಬೇನಾಮಿಯಾಗಿದೆಯೇ? 297 ಕೋಟಿ ರೂಪಾಯಿಗಳನ್ನು ವಸೂಲಿ ಮಾಡುವ ವಿಚಾರದಲ್ಲಿ ಇಷ್ಟೊಂದು ಹಾರಿಕೆ ಉತ್ತರವನ್ನು ಕೊಡುತ್ತಿದ್ದೀರಿ. ತಾವು ಹಣಕಾಸಿನ ಸಚಿವರಾಗಿ ಸರ್ಕಾರ ಬಹಳ ಭೀಕರವಾದ ಹಣಕಾಸಿನ ಪರಿಸ್ಥಿತಿಯನ್ನು ಎದುರಿಸುವಾಗ, ಈ ರೀತಿ ಹೇಳುತ್ತಿದ್ದೀರಿ. ಒಬ್ಬ ವಿದ್ಯುಚ್ಛಕ್ತಿ ಬಿಲ್ ಕಟ್ಟಲಿಲ್ಲವೆಂದರೆ, ಹೋಗಿ ವಸೂಲ್ಮಾಡುತ್ತೀರಿ. ಆದರೆ, ಇವರ ಬಗ್ಗೆ ನಿಮ್ಮ ಕರುಣೆ ಏನು, ಪ್ರೀತಿ ಏನು? ಸ್ವಲ್ಪ ದಯವಿಟ್ಟು ಅದನ್ನು ಹೇಳಿ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೇ, ಇದನ್ನು ವಸೂಲ್ಮಾಡುವುದಕ್ಕೆ ಏನೇನು ಬೇಕೋ ಅದೆಲ್ಲವನ್ನೂ ಮಾಡುತ್ತಿದ್ದೇವೆ. ಬೇರೆಯವರಿಗೆ ಹೇಗೆ ವಸೂಲ್ಮಾಡುತ್ತಿದ್ದೇವೆಯೋ ಅದೇ ಕಾನೂನನ್ನು ಉಪಯೋಗಿಸಿ, ಇವರಿಗೂ ವಸೂಲ್ಮಾಡತಕ್ಕ ಪ್ರಯತ್ನವನ್ನು ಮಾಡುತ್ತಿದ್ದೇವೆ ಏನಾಗಿದೆಯೆಂದರೆ, ಯಾವುದೋ ಒಂದು ಹೆಸರು ಕೊಟ್ಟಿರುತ್ತಾರೆ, ಅವರು ಬೇನಾಮಿ ಹೆಸರುಗಳು. ಆವರ ಹೆಸರಿನಲ್ಲಿ ಏನೂ ಇರುವುದಿಲ್ಲ, ಯಾವ ಆಸ್ತಿಯೂ ಇರುವುದಿಲ್ಲ. ಈ ತರಹ ಇದೆ. ಇದರಲ್ಲಿ ಕೆಲವರು ಗೊತ್ತಿದ್ದಾರೆ, ಯಾರು ಈ ರೀತಿ ಮಾಡಿದ್ದಾರೆಂದು ಇಲಾಖೆಯವರಿಗೆ ಗೊತ್ತಿದೆ. ಗೊತ್ತಿದ್ದರೂ ಕೂಡ ಕಾನೂನಿನ ರೀತಿಯಲ್ಲಿ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ

ಹೋದರೆ, ಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡು ಬರುತ್ತಾರೆ. ಆ ಕಾರಣದಿಂದ ಕೆಲವು ಕಾನೂನಿನ ತೊಡಕುಗಳು ಇವೆ. ಅದಕ್ಕಾಗಿ ಏನು ಮಾಡುತ್ತಿದ್ದೇವೆಂದರೆ, ಈ 297 ಕೋಟಿ ರೂಪಾಯಿಗಳಲ್ಲಿ ನಾನು ಈ ಮೊದಲೇ ಹೇಳಿದಂತೆ, 159 ಕೋಟಿ ರೂಪಾಯಿ ಅಸಲು ಮತ್ತು 138 ಕೋಟಿ ರೂಪಾಯಿ ಬಡ್ಡಿ ಇದೆ. ಇದು ಬಹಳ ವರ್ಷಗಳಿಂದ ಬಡ್ಡಿ ಬಡ್ಡಿ ಮೇಲೆ ಆಗುತ್ತಾ ಬಂದಿದೆ. ಅದಕ್ಕಾಗಿ ಒಂದುಸಾರಿ ವಿರೋಧಪಕ್ಷದವರನ್ನು ಕರೆದು ಸಭೆ ಮಾಡಿ, ಇದನ್ನು ವಸೂಲ್ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬಹುದೆಂಬುದನ್ನು ತೀರ್ಮಾನ ಮಾಡೋಣ.

ಅಧ್ಯಕ್ಷರು: ಅದು ಒಳ್ಳೆಯ ಸಲಹೆ.

ಶ್ರೀ ವಾಟಾಳ್ ನಾಗರಾಜ್: ಇವರ ಪಾಪದ ಕೆಲಸಕ್ಕೆ ನಾವೇಕೆ ಹೋಗಬೇಕು. ಈ ಅಬಕಾರಿ ಇಲಾಖೆ ಧರ್ಮಛತ್ರವಾಗಿದೆ. ಯಾರು ಏನು ಬೇಕಾದರೂ ಮಾಡಬಹುದು.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಹಣಕಾಸಿನ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಈ 297 ಕೋಟಿ ರೂಪಾಯಿಗಳು ಬಹಳ ವರ್ಷಗಳಿಂದ ಬಾಕಿ ಇದೆಯೆಂದು ಹೇಳುತ್ತಿದ್ದಾರೆ. ಇದಕ್ಕೆ ಬಡ್ಡಿ ಕೊಡಬೇಕೆಂದು ನಿಯಮಾವಳಿಯಲ್ಲಿ ಇದೆ. ಇದನ್ನು ಆಯಾ ವರ್ಷಗಳಲ್ಲಿ ವಸೂಲ್ಮಾಡಲಿಲ್ಲ. ಬೇನಾಮಿ ಹೆಸರುಗಳಲ್ಲಿ ಆಗುವುದಕ್ಕೆ ಸರ್ಕಾರವೇ ಒಳ ಒಪ್ಪಂದ ಮಾಡಿಕೊಂಡು, ಎಲ್ಲರೂ ಸೇರಿ ಮಾಡುತ್ತಿದ್ದಾರೆಂದು ಜನ ಮಾತನಾಡುತ್ತಿರುವುದು ಸತ್ಯಸಂಗತಿಯಾಗಿದೆ. ಇಂತಹ ಸಮಯದಲ್ಲಿ ತಾವು ಹೊಸದಾಗಿ ಈ ಇಲಾಖೆಯನ್ನು ವಹಿಸಿಕೊಂಡಿದ್ದೀರಿ ಅಥವಾ ಮುಖ್ಯಮಂತ್ರಿಗಳು ನಿಮಗೆ ಕೊಟ್ಟಿದ್ದಾರೆ. ಆದರೆ, ನಿಮಗೆ ವಹಿಸಿಕೊಟ್ಟಿರುವುದು ಬಡ್ಡಿಯನ್ನು ಮನ್ನಾ ಮಾಡುವುದಕ್ಕೆ ಕೊಟ್ಟಿದ್ದಾರೋ ಅಥವಾ ಜಬರ್ದಸ್ತಾಗಿ ಪೂರ್ತಿ 297 ಕೋಟಿ ರೂಪಾಯಿಗಳನ್ನು ವಸೂಲ್ಮಾಡಿ, ಅಭಿವೃದ್ಧಿ ಕಾರ್ಯಗಳಿಗೆ ಹಣ ತೊಡಗಿಸುವುದಕ್ಕೆ ಮಾಡಿದ್ದಾರೋ ಎಂಬ ಅನುಮಾನ ಬರುವ ರೀತಿಯಲ್ಲಿ ನಿಮ್ಮ ಉತ್ತರ ಇದೆ. ಅದಕ್ಕಾಗಿ ನಾನು ವಿನಂತಿ ಮಾಡುತ್ತೇನೆ. ನೀವು, ಈ ವಿಚಾರದಲ್ಲಿ ವಿರೋಧ ಪಕ್ಷದವರನ್ನು ಕರೆಯತಕ್ಕ ಅಗತ್ಯ ಇಲ್ಲ. ಕಾನೂನಿನ ಚೌಕಟ್ಟಿನಲ್ಲಿ ಅವರ ಆಸ್ತಿಪಾಸ್ತಿ ಹರಾಜು ಹಾಕಬಹುದು. ಆ ಬೇನಾಮಿಯವರು ಯಾರ ಪರ ಇದ್ದಾರೆ ಎಂಬುದು ತಮಗೆ ಗೊತ್ತಿದೆ. ಇದನ್ನು ಪತ್ತೆ ಹಚ್ಚಿ, ವಸೂಲ್ಮಾಡತಕ್ಕ ದಿಟ್ಟ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವುದನ್ನು ನೇರವಾಗಿ ಹೇಳಿ.

ಶ್ರೀ ಸಿದ್ಧರಾಮಯ್ಯ: ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಕಾನೂನು ಬಗ್ಗೆ ನಿಮಗೂ ಗೊತ್ತಿದೆ. ಆದ್ದರಿಂದ ಕಾನೂನು ರೀತಿಯಲ್ಲಿ ನೀವು ಯಾವರೀತಿ ಮಾಡಬಹುದು ಎಂಬ ಬಗ್ಗೆ ಸಲಹೆ ಕೊಡಿ. ನಾನು ಏನು ಹೇಳುತ್ತಿದ್ದೇನೆಂದರೆ, ಇದ್ದು ಬಹಳ ವರ್ಷಗಳಿಂದ ಬೆಳೆದುಕೊಂಡು ಬಂದಿರತಕ್ಕ ಒಂದು ರೋಗ. ನಿನ್ನೆ ಅಥವಾ ಮೊನ್ನೆ ಆಗಿರತಕ್ಕಂಥಾದ್ದು ಅಲ್ಲ. ಇದನ್ನು ಕಟ್ಟುನಿಟ್ಟಾಗಿ ವಸೂಲ್ಮಾಡಬೇಕೆಂಬುದು

ನಮ್ಮ ಉದ್ದೇಶ. ಈ ಕಾರಣಕ್ಕೋಸ್ಕರ, ಇದನ್ನು ಹೇಗೆ ವಸೂಲ್ಮಾಡಬೇಕೆಂಬ ವಿಚಾರಕ್ಕೆ ನಿಮ್ಮನ್ನು ಕರೆಯುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ನಿಮ್ಮ ಉದ್ದೇಶ ಇದೆ, ಆದರೆ ಪ್ರಯತ್ನ ಇಲ್ಲ. ಇದೊಂದು ರೀತಿಯಲ್ಲಿ ಲೂಟಿ ಇಲಾಖೆ. ಅಬಕಾರಿ ಇಲಾಖೆ ಲೂಟಿ ಇಲಾಖೆಯಾಗಿರುತ್ತದೆ. ಇದು ನಿರಂತರವಾಗಿ ನಡೆಯುತ್ತಿದೆ.

ಶ್ರೀ ಸಿದ್ಧರಾಮಯ್ಯ: ಆ ಲೂಟಿಯನ್ನು ಹೇಗೆ ತಪ್ಪಿಸಬೇಕೆಂಬುದನ್ನು ವಿಚಾರ ಮಾಡೋಣ.

ಶ್ರೀ ವಾಟಾಳ್ ನಾಗರಾಜ್: ನಿಮಗೆ ಅಧಿಕಾರ ಕೊಟ್ಟಿದ್ದೇವೆ. ಆದರೂ ಈ ಲೂಟಿಯನ್ನು ತಪ್ಪಿಸುವುದಕ್ಕಾಗಿರುವುದಿಲ್ಲ. ಹಾಗಾದರೆ, ನೀವು ಅಧಿಕಾರ ಬಿಡಬೇಕು ಅಥವಾ ಎರಡರಲ್ಲಿ ಒಂದು ಮಾಡಬೇಕು.

ಶ್ರೀ ಸಿದ್ಧರಾಮಯ್ಯ: ನಾವು ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡಬೇಕಾಗುತ್ತದೆ. ಮತ್ತು ಕಾನೂನು ಚೌಕಟ್ಟಿನ ಆಚೆಯೂ ಕೂಡ ವಸೂಲ್ಮಾಡುವುದಕ್ಕೆ ಏನು ಮಾಡಬೇಕೆಂಬ ಬಗ್ಗೆ ಪ್ರಯತ್ನ ಮಾಡುತ್ತೇವೆ. ಇಷ್ಟೆಲ್ಲಾ ಆದರೂ ಕೂಡ ಸಾಧ್ಯವಾಗಲಿಲ್ಲವೆಂದಾಗ, ಏನು ಮಾಡಬೇಕೆಂಬುದರ ಬಗ್ಗೆ, ಯಾರು ಯಾರು ಬಾಕಿ ಇದ್ದಾರೆ, ಯಾರು ಯಾರು ಬೇನಾಮಿಗಳು ಇದ್ದಾರೆ ಎನ್ನುವ ವಿಚಾರದಲ್ಲಿ ಕುಳಿತುಕೊಂಡು ಚರ್ಚೆ ಮಾಡೋಣ, ಚರ್ಚೆ ಮಾಡಿ ಏನು ಮಾಡಬೇಕೆಂದು ತೀರ್ಮಾನ ಮಾಡೋಣ.

ಅಧ್ಯಕ್ಷರು: ಈಗ ಪ್ರಶ್ನೋತ್ತರ ಮುಗಿದಿದೆ.

ಶ್ರೀ ವಾಟಾಳ್ ನಾಗರಾಜ್: ಇದು 297 ಕೋಟಿ ರೂಪಾಯಿ ವಿಚಾರ. ಮಾನ್ಯ ಉಪ ಮುಖ್ಯಮಂತ್ರಿಗಳು ಏನೂ ಗೊತ್ತಿಲ್ಲವೆಂಬ ಬಗ್ಗೆ ಹೇಳುತ್ತಿದ್ದಾರೆ.

ಅಧ್ಯಕ್ಷರು: ಪ್ರಶ್ನೋತ್ತರ ಮುಗಿದಿದೆ. ಈ ದಿವಸ 15 ನಿಮಿಷ ಹೆಚ್ಚಿಗೆ ತೆಗೆದುಕೊಂಡಿದ್ದೇವೆ. ಅಧಿವೇಶನದ ಮೊದಲನೇ ದಿವಸವಾದ್ದರಿಂದ 15 ನಿಮಿಷ ವಿನಾಯಿತಿ ಕೊಟ್ಟಿದ್ದೇನೆ. ನಾಳೆ ಯಾವ ಕಾರಣಕ್ಕೂ ಕೂಡ, ಪ್ರಶ್ನೋತ್ತರಕ್ಕೆ ಒಂದು ಗಂಟೆಗಿಂತ ಒಂದು ಸೆಕೆಂಡ್ ಕೂಡ ವಿಸ್ತರಿಸುವುದಿಲ್ಲ. ಸದಸ್ಯರು, ಮಂತ್ರಿಗಳು ಎಲ್ಲರೂ ಕೂಡ ಪ್ರಶ್ನೆ, ಉಪ ಪ್ರಶ್ನೆ ಹಾಗೂ ಉತ್ತರವನ್ನು ಕೊಡತಕ್ಕ ಸಂದರ್ಭದಲ್ಲಿ ಜಾಗ್ರತೆ ವಹಿಸಬೇಕು. ಗಂಟೆಗಟ್ಟಲೆ ಪ್ರಶ್ನೋತ್ತರ ನಡೆಸತಕ್ಕಂಥಾದ್ದು ಸದನಕ್ಕೆ ಗೌರವ ತರತಕ್ಕಂಥ ವಿಷಯವಲ್ಲ. ಆದ್ದರಿಂದ, ಎಲ್ಲರ ಸಹಕಾರವನ್ನು ಅಪೇಕ್ಷೆ ಮಾಡುತ್ತೇನೆ. ಈಗ ಲಿಖಿತ ಮೂಲಕ ಉತ್ತರಿಸತಕ್ಕ ಪ್ರಶ್ನೆಗಳು.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಒಂದನೇ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಹಾವೇರಿ ವಿಭಾಗದ ಗ್ರಾಮಾಂತರ ಪ್ರದೇಶಗಳಲ್ಲಿ ಲೋಡ್ ಶೆಡ್ಡಿಂಗ್

1 (108)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವಿದ್ಯುತ್ ಮಂಡಳಿಯ ಹಾವೇರಿ ವಿಭಾಗದ ಗ್ರಾಮಾಂತರ ಪ್ರದೇಶದಲ್ಲಿ ಎಷ್ಟು ತಾಸು ವಿದ್ಯುತ್ ಪೂರೈಸಲಾಗುತ್ತಿದೆ, ಹಾಗೂ ಯಾವ ರೀತಿಯ ಪೂರೈಕೆ ಮಾಡಲಾಗುತ್ತಿದೆ? (ವಿವರ ನೀಡುವುದು)

ಆ) ಇದನ್ನು ನಿವಾರಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು):

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಹಾವೇರಿ ವಿಭಾಗದ ಗ್ರಾಮಾಂತರ ಪ್ರದೇಶಗಳಲ್ಲಿ ನಿರ್ವಹಿಸಲಾಗುತ್ತಿರುವ ಲೋಡ್ ಶೆಡ್ಡಿಂಗ್ ವಿವರಗಳು ಕೆಳಕಂಡಂತಿದೆ.

	ತಂಡ-1	ತಂಡ-2
ಬೆಳಿಗ್ಗೆ 6 ರಿಂದ ಮಧ್ಯಾಹ್ನ 12 ಗಂಟೆವರೆಗೆ	3 ಫೇಸ್‌ನಲ್ಲಿ ವಿದ್ಯುತ್ ಸರಬರಾಜು ಇರುತ್ತದೆ	ವಿದ್ಯುತ್ ಸರಬರಾಜು ಇರುವುದಿಲ್ಲ.
ಮಧ್ಯಾಹ್ನ 12ರಿಂದ ಸಂಜೆ 6 ಗಂಟೆವರೆಗೆ	ವಿದ್ಯುತ್ ಸರಬರಾಜು ಇರುವುದಿಲ್ಲ.	3 ಫೇಸ್‌ನಲ್ಲಿ ವಿದ್ಯುತ್ ಸರಬರಾಜು ಇರುತ್ತದೆ.
ಸಂಜೆ 6ರಿಂದ ರಾತ್ರಿ 10 ಗಂಟೆವರೆಗೆ	ಸಿಂಗಲ್ ಫೇಸ್‌ನಲ್ಲಿ ವಿದ್ಯುತ್ ಸರಬರಾಜು ಇರುತ್ತದೆ.	ಸಿಂಗಲ್ ಫೇಸ್‌ನಲ್ಲಿ ವಿದ್ಯುತ್ ಸರಬರಾಜು ಇರುತ್ತದೆ.
ರಾತ್ರಿ 10 ಗಂಟೆಯಿಂದ ಮಾರನೆಯ ದಿನ ಬೆಳಗಿನ ಜಾವ 2 ಗಂಟೆವರೆಗೆ	3 ಫೇಸ್‌ನಲ್ಲಿ ವಿದ್ಯುತ್ ಸರಬರಾಜು	ಸಿಂಗಲ್ ಫೇಸ್‌ನಲ್ಲಿ ವಿದ್ಯುತ್ ಸರಬರಾಜು